ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/25/ಇಎಸ್‌ಟಿ(1)ಎ/2017-18 / 1233

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 05-08-2017

## ಸುತ್ತೋಲೆ

**ವಿಷಯ : 2017-18ನೇ ಸಾಲಿನ ವರ್ಗಾವಣೆ ಕೌನ್ಸಲಿಂಗ್ ಕುರಿತು.**
**ಉಲ್ಲೇಖ: ವರ್ಗಾವಣೆ / ನಿಯೋಜನೆ ಕೋರಿ ಇಲಾಖೆಯಲ್ಲಿ ಸ್ವೀಕೃತವಾಗಿರುವ ಮನವಿಗಳು.**

***

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳು ವಯೋನಿವೃತ್ತಿ ಸಮೀಪ, ವೈಯಕ್ತಿಕ ಕಾರಣ, ಪತಿ-ಪತ್ನಿ ಪ್ರಕರಣದನ್ವಯ ವರ್ಗಾವಣೆ ಅಥವಾ ನಿಯೋಜನೆ ಮಾಡುವಂತೆ ಕೋರಿ ಮನವಿಗಳು ಮತ್ತು ಶಿಫಾರಸ್ಸು ಪತ್ರಗಳು ಇಲಾಖೆಯಲ್ಲಿ ಸ್ವೀಕೃತಗೊಂಡಿರುತ್ತವೆ. ಆದರೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿ / ಸಿಬ್ಬಂದಿಗಳ ವರ್ಗಾವಣೆ ಅಥವಾ ನಿಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2012 ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು 2013 ಜಾರಿಯಲ್ಲಿರುತ್ತವೆ. ಸದರಿ ವರ್ಗಾವಣೆ ಅಧಿನಿಯಮ ಮತ್ತು ನಿಯಮಗಳನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳ ವರ್ಗಾವಣೆಯನ್ನು ಕಡ್ಡಾಯವಾಗಿ ಕೌನ್ಸಲಿಂಗ್ ಮೂಲಕವೇ ಮಾಡಬೇಕಾಗಿರುತ್ತದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ವರ್ಗಾವಣೆ ನಿಯಮಗಳು ಕಂಡಿಕೆ 8(1) ರಂತೆ ಸಾಮಾನ್ಯ ವರ್ಗಾವಣೆಗಳನ್ನು ಸರ್ಕಾರವು ನಿಗದಿಪಡಿಸುವ ದಿನಾಂಕದಲ್ಲಿ ಮಾಡಬೇಕಾಗಿರುತ್ತದೆ. ಇಲಾಖೆಯಲ್ಲಿ 2017-18ನೇ ಸಾಲಿನಲ್ಲಿ ವರ್ಗಾವಣೆ ಕೌನ್ಸಲಿಂಗ್ ನಡೆಸುವ ಬಗ್ಗೆ ಸರ್ಕಾರದಿಂದ ಇಲ್ಲಿಯವರೆಗೆ ಯಾವುದೇ ನಿರ್ದೇಶನ ಬಂದಿರುವುದಿಲ್ಲ. 2017-18ನೇ ಸಾಲಿನಲ್ಲಿ ವರ್ಗಾವಣೆ ಕೌನ್ಸಲಿಂಗ್ ನಡೆಸುವ ಕುರಿತು ಸರ್ಕಾರದ ನಿರ್ದೇಶನ ಬಂದ ನಂತರದಲ್ಲಿ ಇಲಾಖಾ ವೆಬ್‌ಸೈಟ್‌ನಲ್ಲಿ ಮಾಹಿತಿ ಒದಗಿಸಲಾಗುವುದು. ವರ್ಗಾವಣೆಗಳನ್ನು ಕೌನ್ಸಲಿಂಗ್ ಮುಖಾಂತರ ಮಾಡಬೇಕಾಗಿದ್ದು, ಯಾವುದೇ ವೈಯಕ್ತಿಕ ಮನವಿಗಳನ್ನು ಸಲ್ಲಿಸಬಾರದಾಗಿ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಸೂಚಿಸಿದೆ.

ಕರಡು ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ.

8/8/17
ಜಂಟಿ ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ / ಕಿರಿಯ ತಾಂತ್ರಿಕ ಶಾಲೆಗಳು - ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು;
2. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು;
3. ಕಛೇರಿ ಪ್ರತಿ.